CC No.:1539/2022
D.W.:1

ಈ ದಿನ ದಿಃ23.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲುಃ- ಪಿರ್ಯಾದುದಾರರ ಪರ ವಕೀಲರಾದ ಶ್ರೀ ಎಬಿಎಸ್ ರವರಿಂದಃ-**

1. ನಿಪಿ-1 ನನ್ನ ಬ್ಯಾಂಕ್ ಖಾತೆಗೆ ಸಂಬಂಧಿಸಿದ ಚೆಕ್ಕು ಎಂದರೆ ಸರಿ. ಸಾಕ್ಷಿಗೆ ನಿಪಿ-1ನ್ನು ತೋರಿಸಿ ಅದರಲ್ಲಿರುವ ಸಹಿ ನಿಮ್ಮದೇನಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ದಾಖಲೆಯನ್ನು ನೋಡಿ ಹೌದು ನನ್ನದೆ ಎಂದು ನುಡಿಯುತ್ತಾರೆ. ಪಿರ್ಯಾದುದಾರರು ನನ್ನ ಚೆಕ್ಕನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆಂದು ನಾನು ಅವರ ವಿರುದ್ದ ಯಾವುದೇ ಪೊಲೀಸ್ ದೂರು ನೀಡಿಲ್ಲ ಮತ್ತು ಯಾವುದೇ ಪ್ರಕಾರದ ಕ್ರಮ ತೆಗೆದುಕೊಂಡಿಲ್ಲ.

2. ನಾನು ಪಿರ್ಯಾದುದಾರರಿಗೆ ಯಾವುದೇ ಉತ್ತರದ ನೋಟಿಸ್ ನ್ನು ಕಳುಹಿಸಿರುವುದಿಲ್ಲ. ನಾನು ವಾಸ ಮಾಡುತ್ತಿರುವ ಮನೆಯ ವಿಳಾಸ ಏಡುಮಡು ಗ್ರಾಮ, ಕಗ್ಗಲಹಳ್ಳಿ ಅಂಚೆ, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ ಆಗಿರುತ್ತದೆ. ನಾನು ಈಗ ಹೇಳಿದ ವಿಳಾಸದಲ್ಲಿಯೇ ವಾಸವಿರುತ್ತೇನೆ ಎಂದರೆ ಸರಿ.

3. ನನ್ನ ಮತ್ತು ಪಿರ್ಯಾದುದಾರರ ನಡುವೆ ಕೇವಲ ಒಮ್ಮೆ ಮಾತ್ರ ಹಣಕಾಸಿನ ವ್ಯವಹಾರ ಇರುತ್ತದೆ. ನಾನು ಪಿರ್ಯಾದುದಾರರಿಗೆ 2017ನೇ ಸಾಲಿನಲ್ಲಿ 2ಲಕ್ಷ

ರೂಪಾಯಿ ಹಣವನ್ನು ಮರುಪಾವತಿ ಮಾಡಿರುತ್ತೇನೆ, ದಿನಾಂಕ ಮತ್ತು ತಿಂಗಳನ್ನು ಖಚಿತವಾಗಿ ಹೇಳಲು ಆಗುವುದಿಲ್ಲ. ನಾನು ಪಿರ್ಯಾದುದಾರರಿಂದ ಒಟ್ಟು 5ಲಕ್ಷ ರೂಪಾಯಿ ಹಣವನ್ನು ಸಾಲವಾಗಿ ಪಡೆದುಕೊಂಡಿದ್ದೆ. ಸಾಲ ಪಡೆದುಕೊಂಡ ದಿನಾಂಕ, ತಿಂಗಳು ಮತ್ತು ವರ್ಷ ನನಗೆ ಈಗ ನೆನಪಿಲ್ಲ. ನಾನು ಪಿರ್ಯಾದುದಾರರಿಗೆ 2ಲಕ್ಷ ಹಣವನ್ನು ನಗದಾಗಿ ಯಾವತ್ತು ಮರುಪಾವತಿಸಿಲ್ಲ ಎಂದರೆ ಸರಿಯಲ್ಲ.

4. ಪಿರ್ಯಾದುದಾರರಿಂದ ಮಾರ್ಚ್ 2018ರಲ್ಲಿ ಒಟ್ಟು 7ಲಕ್ಷದ 24 ಸಾವಿರ ರೂಪಾಯಿಗಳನ್ನು ಸಾಲವಾಗಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. 7ಲಕ್ಷದ 24 ಸಾವಿರ ರೂಪಾಯಿಗಳ ಪೈಕಿ ನಾನು ಪಿರ್ಯಾದುದಾರರಿಗೆ ಕೇವಲ 3ಲಕ್ಷದ 50ಸಾವಿರ ರೂಪಾಯಿಗಳನ್ನು ಮಾತ್ರ ಮರುಪಾವತಿಸಿರುತ್ತೇನೆ ಎಂದರೆ ಸರಿಯಲ್ಲ. ಉಳಿದ 3ಲಕ್ಷ 74 ಸಾವಿರ ರೂಪಾಯಿಗಳ ಮರುಪಾವತಿಗೆ ಸಂಬಂಧಿಸಿದಂತೆ ನಾನು ಪಿರ್ಯಾದುದಾರರಿಗೆ ನಿಪಿ-1ರಂತೆ ಚೆಕ್ಕನ್ನು ಕೊ ಟ್ಟಿರುತ್ತೇನೆ ಎಂದರೆ ಸರಿಯಲ್ಲ. 3ಲಕ್ಷ 74 ಸಾವಿರ ರೂಪಾಯಿಗಳಿಗೆ ಸಂಬಂಧಿಸಿದಂತೆ ಪಿರ್ಯಾದುದಾರರಿಗೆ ನಿಪಿ-1ನ್ನು ಕೊಟ್ಟಿದ್ದರು ಕೊಟ್ಟಿಲ್ಲ ಎಂದು ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 3ಲಕ್ಷ 74 ಸಾವಿರ ರೂಪಾಯಿ ಹಣವನ್ನು ಪಿರ್ಯಾದುದಾರರಿಗೆ ನಾನು ಕೊಡುವುದು ಬಾಕಿ ಇದ್ದರು ಸುಳ್ಳು ದಾಖಲೆಗಳ ಆಧಾರದ ಮೇಲೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ. ಪಿರ್ಯಾದುದಾರರು ನನಗೆ ಕಳುಹಿಸಿದ ನೋಟಿಸ್ ನನಗೆ ತಲುಪಿರುತ್ತದೆ ಎಂದರೆ ಸರಿ. ಸದರಿ ನೋಟಿಸ್ಸಿ ಗೆ ನಾನು ಉತ್ತರ ಕೊಟ್ಟಿಲ್ಲ ಎಂದರೆ ಸರಿ.

**ಮರುವಿಚಾರಣೆಃ- ಇಲ್ಲ.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**